■ ಹನಿ

## ನಾಯಕನ ಆಟ



‘ಆಸ್ಟ್ರೇಲಿಯಾದ ವಿರುದ್ಧದ ಎರಡನೇ ಟೆಸ್ಟ್ ಸೋತರೂ ಪರವಾಗಿಲ್ಲ; ಸಚಿನ್ ನೂರನೆಯ ಸೆಂಚುರಿ ಹೊಡೆದರೆ ಸಾಕು’– ಎಂದು ಕಾಯುತ್ತಿದ್ದವರಿಗೆ ನಿರಾಶೆಯಾಯಿತು. ಆಸ್ಟ್ರೇಲಿಯಾದ ನಾಯಕ ಮಿಖಾಯಿಲ್ ಕ್ಲಾರ್ಕ್, ಸಚಿನ್‌ನ ವಿಕೆಟನ್ನು ಎಗರಿಸಿಯೇ ಬಿಟ್ಟ! 80 ರನ್ ಹೊಡೆದು ನೂರನೆಯ ಶತಕದತ್ತ ದಾಪುಗಾಲಿಟ್ಟಿದ್ದ ಸಚಿನ್ ಮುಖದಲ್ಲಿ ನಿರಾಶೆ ಎದ್ದು ಕಾಣುತ್ತಿತ್ತು.

ಮಿಖಾಯಿಲ್ ಕ್ಲಾರ್ಕ್ ವೃತ್ತಿಜೀವನಕ್ಕೆ ಹೊಸದೊಂದು ಟರ್ನ್ ನೀಡಿದ ಟೆಸ್ಟ್ ಇದು. 2011ರ ಜನವರಿಯಲ್ಲಿ ಆಸ್ಟ್ರೇಲಿಯಾ ನಾಯಕತ್ವ ವಹಿಸಿಕೊಂಡ ಬಳಿಕ ಅಂತಹ ಸಾಧನೆಗಳೇನೂ ಈತನ ಬೆನ್ನಿಗೆ ಅಂಟಿಕೊಂಡಿಲ್ಲ. ನಾಯಕತ್ವ ನಿರ್ವಹಿಸುವ ವಿಷಯದಲ್ಲಿ ಈತ ಅಂತಹ ಬುದ್ಧಿವಂತನೂ ಅಲ್ಲ. ಆದರೆ ಆಸ್ಟ್ರೇಲಿಯಾದಲ್ಲಿ ಮೊತ್ತಮೊದಲ ಸರಣಿ ಜಯ ದಾಖಲಿಸಬೇಕೆಂಬ ಹಂಬಲದಲ್ಲಿದ್ದ ಭಾರತೀಯ ತಂಡದ ಕನಸನ್ನು ನುಚ್ಚುನೂರು ಮಾಡಿದ ಕೀರ್ತಿ ಕ್ಲಾರ್ಕ್‌ಗೆ ಸಲ್ಲುತ್ತದೆ.

ಈ ಟೆಸ್ಟ್ ಕ್ಲಾರ್ಕ್‌ಗೆ (ಬರ್ತ್‌ಡೇ 2-4-81) ಇದೊಂದೇ ಕಾರಣಕ್ಕೆ ಮಹತ್ವದ್ದಲ್ಲ. ಆತನ ಇನ್ನೂ ಒಂದು ಸಾಧನೆಯಿದೆ. ಮೊದಲ ಇನಿಂಗ್ಸ್‌ನಲ್ಲಿ ಅತ್ಯುತ್ತಮ ಬ್ಯಾಟಿಂಗ್ ನಡೆಸಿದ ಕ್ಲಾರ್ಕ್ ಭಾರತದ ವಿರುದ್ಧ ಅಜೇಯ 329 ರನ್ ಹೊಡೆದ. ಆಗ ಆಸ್ಟ್ರೇಲಿಯಾದ ಮೊತ್ತ 4 ವಿಕೆಟ್‌ಗೆ 482 ರನ್. ಕ್ಲಾರ್ಕ್ ಈ ಹಂತದಲ್ಲಿ ಚಹಾ ವಿರಾಮದ ಬಳಿಕ ಇನ್ನೂ ಆಡಬಹುದಿತ್ತು. ತನ್ನ ವೈಯಕ್ತಿಕ ರನ್‌ಗಳನ್ನು ಹಿಗ್ಗಿಸಿ ತನ್ನ ತಂಡದ ಪರವಾಗಿ ಅತ್ಯಧಿಕ ರನ್ ಗಳಿಸಿದ ಮಾರ್ಕ್ ಟೇಲರ್ ಮತ್ತು ಡಾನ್ ಬ್ರಾಡ್‌ಮನ್ ಅವರ ದಾಖಲೆಗಳನ್ನು ಮುರಿಯಬಹುದಿತ್ತು. ಆದರೆ ಆತ ಇನಿಂಗ್ಸ್ ಡಿಕ್ಲೇರ್ ಮಾಡಿ ಭಾರತವನ್ನು ಎರಡನೆಯ ಇನಿಂಗ್ಸ್ ಆಡಲು ಆಹ್ವಾನಿಸಿದ. ‘ತಂಡದ ವಿಜಯ ಮುಖ್ಯವಾಗಿತ್ತು. ನನ್ನ ವೈಯಕ್ತಿಕ ಸಾಧನೆಯ ಬಗ್ಗೆ ನಾನು ಆಲೋಚಿಸಲೇ ಇಲ್ಲ’ ಎಂದ ಕ್ಲಾರ್ಕ್ ಅಭಿಮಾನಿಗಳ ಹೃದಯ ಗೆದ್ದುಬಿಟ್ಟ.

ಮಧ್ಯಮ ಕ್ರಮಾಂಕದ ಬಲಗೈ ಆಟಗಾರ ಕ್ಲಾರ್ಕ್, ಅಗತ್ಯ ಬಿದ್ದಾಗ ಸ್ಪಿನ್ ಬೌಲಿಂಗ್ ಮಾಡಿ ತಂಡವನ್ನು ವಿಜಯದತ್ತ ಕೊಂಡೊಯ್ಯಬಲ್ಲ ಸವ್ಯಸಾಚಿ. 18ರ ಹರೆಯದಲ್ಲೇ (1999) ನ್ಯೂ ಸೌತ್ ವೇಲ್ಸ್ ತಂಡದ ಪರ ಆಡಿ ದೇಶದ ಗಮನ ಸೆಳೆದ ಕ್ಲಾರ್ಕ್, ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಲು ನಾಲ್ಕು ವರ್ಷ ಕಾಯಬೇಕಾಯಿತು. 2004ರಲ್ಲಿ ಬೆಂಗಳೂರಿನಲ್ಲಿ ಭಾರತದ ವಿರುದ್ಧ ಮೊದಲ ಟೆಸ್ಟ್ ಆಡಿದ್ದ ಕ್ಲಾರ್ಕ್ ಚೊಚ್ಚಲ ಟೆಸ್ಟ್‌ನಲ್ಲೇ 151 ರನ್ ಹೊಡೆದಿದ್ದ. 2004ರಲ್ಲಿ ಅತ್ಯಧಿಕ ರನ್ ಸಾಧನೆ ನಡೆಸಿ, 2005ರಲ್ಲಿ ಆಲನ್ ಬಾರ್ಡರ್ ಮೆಡಲ್ ಗೆದ್ದ. ಆದರೆ 2005ರಲ್ಲಿ ಕಳಪೆ ಸಾಧನೆಯಿಂದಾಗಿ ಟೆಸ್ಟ್ ತಂಡದಿಂದ ಹೊರಬಿದ್ದ. ಮರಳಿ ಯತ್ನವ ಮಾಡಿ ಒಂದು ದಿನದ ಕ್ರಿಕೆಟ್‌ನಲ್ಲಿ 2006ರಲ್ಲಿ ಹಲವು ಆಕರ್ಷಕ ಇನಿಂಗ್ಸ್‌ಗಳನ್ನು ಆಟವಾಡಿ ಮತ್ತೆ ಟೆಸ್ಟ್ ತಂಡಕ್ಕೆ ಲಗ್ಗೆಯಿಟ್ಟ. 2007ರಲ್ಲಿ ವಿಶ್ವಕಪ್ ಗೆಲ್ಲಲೂ ತಂಡಕ್ಕೆ ನೆರವಾದ. ಈಗ ಆತ ಒಂದು ದಿನ ಮತ್ತು ಟೆಸ್ಟ್ ಎರಡೂ ತಂಡಕ್ಕೆ ನಾಯಕ.

ಕಳೆದ ವರ್ಷ ವೈಯಕ್ತಿಕ ಜೀವನದಲ್ಲೂ ಕ್ಲಾರ್ಕ್ ಸಂಕಷ್ಟದಲ್ಲಿದ್ದ. ಗೆಳತಿ ಲಾರಾ ಜತೆಗಿನ ಸಂಬಂಧ ಹಳಸಿ, ನಿಶ್ಚಯವಾಗಿದ್ದ ಮದುವೆಯನ್ನೂ ಮುರಿದುಕೊಂಡ. ಆದರೆ ಈಗ ಆತ ಹೊಸ ಗೆಳತಿ ಕೈಲೀ ಬೋಲ್ಡಿ ಜತೆಗೆ ಸುಖವಾಗಿದ್ದಾನೆ. ಇಬ್ಬರೂ ಮದುವೆಯ ಬಗ್ಗೆ ಇನ್ನೂ ಆಲೋಚಿಸಿಲ್ಲವಂತೆ.




## ಶ್ರೀಮಂತ ಪ್ರಧಾನಿ

ವಿಶ್ವದಲ್ಲೇ ಅತ್ಯಂತ ಹೆಚ್ಚು ಸಂಬಳ ಪಡೆಯುತ್ತಿರುವ ಪ್ರಧಾನಮಂತ್ರಿ ಸಿಂಗಾಪುರದ ಲೀ ಸೀನ್ ಲೂಂಗ್! ಈತನ ಸಂಬಳ ವರ್ಷಕ್ಕೆ 10.6 ಲಕ್ಷ ಡಾಲರ್! ವರ್ಷಕ್ಕೆ 4 ಲಕ್ಷ ಡಾಲರ್ ಸಂಬಳ ಪಡೆಯುವ ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾಗೇ ಈ ಪಟ್ಟಿಯಲ್ಲಿ ಮೂರನೇ ಸ್ಥಾನ! ತಮಾಷೆಯ ಸಂಗತಿಯೆಂದರೆ, ಲೀ ಸೂಂಗ್ ಅವರ ಸಂಬಳ ಇನ್ನೂ ಹೆಚ್ಚಿತ್ತು. ಕಳೆದ ವರ್ಷ ರಾಷ್ಟ್ರದ ಆರ್ಥಿಕ ಸಂಕಷ್ಟವನ್ನು ಪರಿಹರಿಸುವ ನಿಟ್ಟಿನಲ್ಲಿ ಅವರು ತಮ್ಮ ಸಂಬಳವನ್ನು ಶೇಕಡಾ 36ರಷ್ಟು ಕಡಿತಗೊಳಿಸಿದ್ದರು. ಅಷ್ಟು ಕಡಿತವಾದ ಬಳಿಕವೂ ಅತ್ಯಧಿಕ ಸಂಬಳ ಪಡೆಯುವ ರಾಜಕಾರಣಿಯ ಪಟ್ಟಿಯಲ್ಲಿ ಅವರೇ ನಂಬರ್ ಒನ್! ಎರಡನೆ ಸ್ಥಾನದಲ್ಲಿರುವ ಆಸ್ಟ್ರೇಲಿಯಾದ ಪ್ರಧಾನಿಯ ವಾರ್ಷಿಕ 4.80 ಲಕ್ಷ ಡಾಲರ್ ಎಂದರೆ, ಲೀ ಎಷ್ಟು ಮುಂದಿದ್ದಾರೆ ಎನ್ನುವುದನ್ನು ಗಮನಿಸಬಹುದು.

ಪೀಪಲ್ಸ್ ಆ್ಯಕ್ಷನ್ ಪಾರ್ಟಿಯ ಸದಸ್ಯ ಲೀ ಲೂಂಗ್ ಒಮ್ಮಿಂದೊಮ್ಮೆಲೆ ಪ್ರಧಾನಿ ಪಟ್ಟ ಏರಿದ್ದಲ್ಲ. ಅವರ ತಂದೆ ಸಿಂಗಾಪುರದ ಮೊದಲ ಪ್ರಧಾನಿ ಲೀ ಕುವಾನ್ ಯೂ. ತಂದೆಯ ಸಂಪುಟದಲ್ಲಿ ಹಾಗೂ ಆ ಬಳಿಕ ಪ್ರಧಾನಿಯಾದ ಗೊಹ್ ಚೊಕ್ ಟಾಂಗ್ ಸಂಪುಟದಲ್ಲಿಯೂ ಮಂತ್ರಿಯಾಗಿ, ಆ ಬಳಿಕ ಉಪಪ್ರಧಾನಿಯಾಗಿ, ಈಗ ಪ್ರಧಾನಿ ಹುದ್ದೆಯಲ್ಲಿದ್ದಾರೆ. 32ರ ಹರೆಯದಲ್ಲಿ (1984) ಮೊದಲ ಬಾರಿಗೆ ಸಂಸತ್ ಸದಸ್ಯರಾದ ಬಳಿಕ ಈವರೆಗೂ ಅವರು ಸಂಸತ್ತಿನಿಂದ ಹೊರಗೆ ಉಳಿದಿಲ್ಲ. ಸಚಿವರಾಗಿದ್ದಾಗ ವಾಣಿಜ್ಯ ಖಾತೆ, ಹಣಕಾಸು ಖಾತೆಗಳನ್ನೂ ನೋಡಿಕೊಂಡಿದ್ದವರು.

ಕೇಂಬ್ರಿಡ್ಜ್ ವಿ.ವಿ ಯಿಂದ ಅಂಕಗಣಿತದಲ್ಲಿ ಹಾನರ್ಸ್, ಕಂಪ್ಯೂಟರ್ ಸೈನ್ಸ್‌ನಲ್ಲಿ ಡಿಪ್ಲೊಮಾ, ಹಾರ್ವರ್ಡ್ ವಿವಿ ಯಲ್ಲಿ ಮಾಸ್ಟರ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಶನ್– ಹೀಗೆ ಅಪ್ಪನ ಶೂ ಒಳಕ್ಕೆ ಕಾಲಿಡಲು ಬೇಕಾದ ಎಲ್ಲವನ್ನೂ ವಿದೇಶದಲ್ಲಿ ಪಡೆದುಕೊಂಡೇ ಲೀ ಲೂಂಗ್ ಸಿಂಗಾಪುರಕ್ಕೆ ವಾಪಸಾದದ್ದು. ಸ್ವದೇಶಕ್ಕೆ ಬಂದ ಬಳಿಕ ಸೇನೆಗೆ ಸೇರಿ ಅತ್ಯಲ್ಪ ಕಾಲದಲ್ಲೇ ಬ್ರಿಗೇಡಿಯರ್ ಜನರಲ್ ಹುದ್ದೆಗೂ ಏರಿದರು! ‘ಎಲ್ಲವೂ ಸ್ವಜನ ಪಕ್ಷಪಾತ’ ಎಂದು ಜರಿಯುವವರಿದ್ದಾರೆ. ಬಹಳ ಮುಖ್ಯವಾಗಿ ಸಿಂಗಾಪುರದ ಆರ್ಥಿಕ ವ್ಯವಸ್ಥೆಯ ಮೇಲೆ ನಿಯಂತ್ರಣ ಹೊಂದಿರುವ ಸರ್ಕಾರಿ ಹೂಡಿಕೆ ಏಜೆನ್ಸಿಯ ಮೇಲೆ ಲೀ ನಿಯಂತ್ರಣ ಮೊದಲಿನಿಂದಲೂ ಇದೆ. ಸದ್ಯಕ್ಕೆ ಅವರ ಎರಡನೆಯ ಹೆಂಡತಿ ಹೊ ಚಿಂಗ್ ಈ ಏಜೆನ್ಸಿಯ ನಿರ್ದೇಶಕಿ! (ಮೊದಲ ಹೆಂಡತಿ ತೀರಿಕೊಂಡ ಬಳಿಕ ಲೀ ಎರಡನೆ ಮದುವೆಯಾದರು.) ವೈಯಕ್ತಿಕವಾಗಿ ಕ್ಯಾನ್ಸರ್ ಸುಳಿಗೆ ಸಿಕ್ಕು ಬಳಿಕ ಚಿಕಿತ್ಸೆ ಪಡೆದು ಅದರಿಂದ ಹೊರಬಂದಿರುವ ಲೀ ಈವರೆಗೆ ಸಿಂಗಾಪುರದ ಆರ್ಥಿಕ ಸಮಸ್ಯೆಗಳನ್ನು ನಿರ್ವಹಿಸುವಲ್ಲಿ ಯಶಸ್ವಿ ಸಾಧನೆಗಳನ್ನು ತೋರಿದ್ದಾರೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65